ಎಂ ವಿ ಸಿ ನಂ.   343/2023

ಪಿ ಡಬ್ಲ್ಯೂ –     2

ದಿನಾಂಕಃ 19.03.2025 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಶ್ರೀ VDP   ವಕೀಲರಿಂದ –

ನಾನು ನನ್ನ ಮುಖ್ಯ ವಿಚಾರಣೆಯಾಗಿ ಶಪಥ ಪತ್ರವನ್ನು ಹಾಜರುಪಡಿಸಿರುತ್ತೇನೆ. ಶಪಥ ಪತ್ರದಲ್ಲಿ ಬರೆದಿರುವುದನ್ನು ನಾನು ಹೇಳಿ ಬರೆಯಿಸಿದ್ದು, ಬರೆದ ನಂತರ ಅದನ್ನು ನನಗೆ ಓದಿ ಹೇಳಿದ್ದು ನಂತರ ಸಹಿ ಮಾಡಿರುತ್ತೇನೆ. ನನ್ನ ಶಪಥ ಪತ್ರದಲ್ಲಿ ಬರೆದಿರುವುದು ಎಲ್ಲಾ ಸತ್ಯವಾಗಿರುತ್ತದೆ.

ನಿಪಿ–11 ಮತ್ತು 12 ನ್ನು ನಾನೇ ನೀಡಿರುತ್ತೇನೆ.  ಎಕ್ಸ ರೇ ನ್ನು ನೋಡಿರುತ್ತೇನೆ. ನಿಪಿ–12 ನ್ನು ನಾನೇ ನೀಡಿರುತ್ತೇನೆ ಅದರಲ್ಲಿರುವ ಸಹಿಯನ್ನು ನಿಪಿ–12 ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ  ವಕೀಲರಿಂದ –

ಅರ್ಜಿದಾರನ ಗುರುತಿನ ಚಿಹ್ನೆಗಳನ್ನು ಬರೆದಿಲ್ಲ.  ಅರ್ಜಿದಾರರ ಸಹಿಯನ್ನು ನೋಡಿ ಗುರುತಿನ ಚಿಹ್ನೆಯನ್ನು ಬರೆದಿಲ್ಲ. ನಾನು ಆರ್ಜಿದಾರನಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳನ್ನು ನೀಡಿಲ್ಲ.  ಅರ್ಜಿದಾರರನ್ನು ಸಿಟಿ ಸೆಂಟ್ರಲ್ ಅಸ್ಪತ್ರೆಯುಲ್ಲಿ ಚಿಕಿತ್ಸೆ ಪಡೆದಿರುತ್ತಾರೆ.  ಪ್ರವೀಣ ಅವರು ಫೇಷಲ್ ಮ್ಯಾಜಿಲರ್ ಸರ್ಜನ ಎಂದರೆ ಸರಿ.  ಶ್ರೀನಿವಾಸ ಎಸ ಎಂಬುವವರು ಆದೇ ಆಸ್ಪತ್ರೆಯುಲ್ಲಿ ಸೇವೆ ಮಾಡುತ್ತಿದ್ದಾರೆ ಎಂದರೆ ಸರಿ.  ಡಾ. ಎಂ ಬಿ ಸತ್ಯನಾರಾಯಣರವರು ಆದೇ ಆಸ್ಪತ್ರೆಯಲ್ಲಿದ್ದಾರೆ.  ಸುರೇಶ  ಎಂಬುವವರು ಆದೇ ಆಸ್ಪತ್ರೆಯುಲ್ಲಿ ಸೇವೆ ಮಾಡುತ್ತಿದ್ದಾರೆ ಎಂದರೆ ಸರಿ.  ಈ 5 ಜನರು disability certificate ಕೊಡುತ್ತಾರೆ ಎಂದರೆ ಸರ್ಜನರವರು  disability certificate  ಕೊಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ.  ಈ ಜನರನ್ನು ನಾನು ರೇಫರ್  ಮಾಡಿಲ್ಲ.  ಸಿ ಟಿ ಸೆಂಟ್ರಲ್ ಆಸ್ಪತ್ರೆಯಲ್ಲಿ ನನ್ನ ಪ್ಲಾಸ್ಟಿಕ್ ಸರ್ಜರಿ ವಿಭಾಗ ಎಂದರೆ ಸರಿ. ಅಂಗನ್ಯೂನತೆ ಪತ್ರದಲ್ಲಿ ಈ ಅರ್ಜಿದಾರನಿಗೆ ಯಾವುದೇ ಪ್ಲಾಸ್ಟಿಕ ಸರ್ಜರಿ ಮಾಡಿಲ್ಲ ಎಂದರೆ ಸರಿ,  ಡಾ. ಕಿರಣ ರವರು ಮಾಡಿರುತ್ತಾರೆ.  ರೇಡಿಯೋಲಾಜಿ ರಿಪೋರ್ಟ ನ್ನು ನಾನು ಪಡೆದುಕೊಂಡಿಲ್ಲ.  ಮಾಲಿನ್ಯವಾಗಿರುವ ಬಗ್ಗೆ ಬರೆದಿಲ್ಲ. ಅರ್ಜಿದಾನಿಗೆ ಯವುಾದೇ ರೀತಿಯಾದ ಅಂಗನ್ಯೂನತೆ ಇಲ್ಲದ ಕಾರಣ ನಾನು ವರದಿಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.  ಆದೇ ಕಾರಣದಿಂದ ಎಕ್ಸ ರೇ ಕವರ ಮೇಲೆ ಬರೆದಿಲ್ಲ

ಎಂದರೆ ಸರಿಯಲ್ಲ. ಅಂಗನ್ಯೂನತೆ ಮತ್ತು ಇತರೆ ಎಲ್ಲಾ ಸರ್ಜರಿಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ವಿಭಾಗಗಳು ಇದೆ ಎಂದರೆ ಸರಿ. ಹಲ್ಲಿನ ಒಸಡುಗಳಿಗೆ ಸಂಬಂಧಪಟ್ಟಂತೆ ಡೆಂಟಿಸಟ್ ಗೆ ಮಾತ್ರ ಸಂಬಂಧಪಟ್ಟಿದೆ ಎಂದರೆ ಸರಿಯಲ್ಲ. ಹಲ್ಲಿಗೆ ಸಂಬಂಧಪಟ್ಟಂತೆ ಚಿಕಿತ್ಸೆ ನೀಡಿದ್ದೇನೆ. ಮುಖ ದ ಮೇಲೆ ಆದಂತಹ ಎಲ್ಲಾ ಗಾಯಗಳನ್ನು ನಾವೇ ನೋಡುವುದು ಹಲ್ಲಿಗೆ ಸಂಬಂಧಪಟ್ಟ ಚಿಕಿತ್ಸೆಗಳನ್ನು ನಾನು ವ್ರಾಡುತ್ತೇನೆ. ನಾನು ಒಸಡಿನ ಬಗ್ಗೆ ನಾನು ಪ್ರತ್ಯೇಕ ವಾದ ವರದಿಯನ್ನು ಪಡೆದುಕೊಂಡಿಲ್ಲ. ಎದೆಯ ಮೂಳೆಗಳು ಪಕ್ಕೆ ಮೂಳೆಗಳು ಆರ್ಥೋಪೆಡಿಕ್ ಗೆ ಸಂಬಂಧಪಟ್ಟಿದೆ ಎಂದರೆ ಸರಿ. ಪಕ್ಕೆ ಮೂಳೆಗಳಿಗೆ ಸಂಬಂಧಪಟ್ಟಂತೆ ಮೂಳೆ ವೈದ್ಯರ ಹತ್ತಿರ ಕಳುಹಿಸಿ ವರದಿಯನ್ನು ಪಡೆದಿಲ್ಲ. ಪಕ್ಕೆ ಗೆ ಸಂಬಂಧಪಟ್ಟಂತೆ ಯಾವುದೇ ಶಸ್ತ್ರಾ ಚಿಕಿತ್ಸೆ ನೀಡಲು ಆಗುವುದಿಲ್ಲ. ಮಾಲ್ ಯೂನಿಯನ್ ಆಗಿರುವ ಬಗ್ಗೆ ನಾನು ದಾಖಲಾತಿಗಳನ್ನು ಹಾಜರು ಪಡಿಸಿಲ್ಲ. ಪಕ್ಕೆಗೆ ಸಂಬಂಧ ಪಟ್ಟಂತೆ 15% disability ಕೊಟ್ಟಿರುವುದು ಹೂಹೆ ಮಾಡಿಕೊಟ್ಟಿರುವುದು ಸರಿಯಲ್ಲ. ನಾನು ಡೆಂಟಿಸ್ಟ ಮತ್ತು ಆರ್ಥೋಪೆಡಿಕ್ ವರದಿ ಪಡೆದುಕೊಂಡಿಲ್ಲ ಎಂದರೆ ಸರಿ. ನಾನು ಯಾವುದೇ ಅನುಮತಿ ಪಡೆಯಲಾದರೆ ಅರ್ಜಿದಾರರಿಗೆ ಸುಳ್ಳು ಪ್ರಮಾಣ ಪತ್ರವನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಲಿವರ್ ಗೆ ಸಂಬಂಧಪಟ್ಟಂತೆ ಪರಿಣಿತನಲ್ಲ ಎಂದರೆ ಸಾಕ್ಷಿಯೂ ನಾನು ಸರ್ಜನ್ ಆಗಿದ್ದರಿಂದ ಸರ್ಜರಿ ಮಾಡುತ್ತೇನೆ. ಲಿವರಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ವಿಭಾಗ ಇಲ್ಲ. ನಮ್ಮ ಆಸ್ಪತ್ರೆಯಲ್ಲಿ ನ್ಯೂರೋ ಸರ್ಜನ ಹೆಸರು ಸತ್ಯನಾರಯಣ. ಲಿವರ್ ಗೆ ಸಂಬಂಧಪಟ್ಟಂತೆ ತೊಂದರೆ ಯಾದರೆ ಸತ್ಯನಾರಾಯಣರವರಿಗೆ ರೇಫರ ಮಾಡುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಅನುಕೂಲವಾಗಲಿ ಎಂದು ಜನರಲ್ ಡಿಪಾರ್ಮೆಂಟ್ ಗೆ ಕಳುಹಿಸದೇ ನಮ್ಮ ವಿಭಾಗದಲ್ಲಿ ಓ ಪಿ ಡಿ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ಲಿವರ್ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡ ಅಂಗನ್ಯೂನತೆ ಪ್ರಮಾಣಪತ್ರ ನೀಡಿದ್ದೇನೆ ಎಂದೆ ಸರಿಯಲ್ಲ. ನಾನು ಸಂಪೂರ್ಣ ದೇಹಕ್ಕೆ disability ಪ್ರಮಾಣ ಪತ್ರ ನೀಡಿರುವುದಿಲ್ಲ. ನಾನು ಸಂಪೂರ್ಣ ದೇಹಕ್ಕೆ ತೆಗೆದುಕೊಂಡರೆ disability 5 % ಕಡಿಮೆಯಾಗುತ್ತದೆ. ಅರ್ಜಿದಾರನಿಗೆ ಯಾವುದೇ ಇಲ್ಲದೇ ಇದ್ದರೂ ಕೂಡ ನಾನು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.
ನ್ಯಾಯಾಲಯ, ದಾವಣಗೆರೆ